# ಶ್ರೀ ಮಲ್ಲಿಕಾರ್ಜುನ ಶ್ರೀಗಳವರ ಸ್ಮರಣೋತ್ಸವ ಸುದ್ದಿ

ಚಿತ್ರದುರ್ಗ ಅ. 7 - ಹೊಳಲ್ಕೆರೆಯ ಒಂಟಿಕಂಬದ ಮುರುಘಾಮಠದಲ್ಲಿಂದು ಲಿಂಗೈಕ್ಯ ಜಗದ್ಗುರು ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಸ್ಮರಣೋತ್ಸವ ನೆರವೇರಿತು.

ಸಮ್ಮುಖ ವಹಿಸಿದ್ದ ಹೆಬ್ಬಾಳು ವಿರಕ್ತಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮಿಗಳು ಮಾತನಾಡಿ, ಮಲ್ಲಿಕಾರ್ಜುನ ಶ್ರೀಗಳು ಜಂಗಮಪ್ರಿಯರು. ಭಕ್ತರಿಗೆ ಉತ್ತಮ ಆತಿಥ್ಯ ಮಾಡಿಸುತ್ತಿದ್ದರು. ಅವರ ಶಿಸ್ತು ನಮಗೆಲ್ಲರಿಗೆ ದಾರಿ ದೀಪ ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಅಥಣಿ ಗಚ್ಚಿನಮಠದ ಶ್ರೀ ಶಿವಬಸವ ಗುರುಮುರುಘರಾಜೇಂದ್ರ ಸ್ವಾಮಿಗಳು ಮಾತನಾಡಿ, ಮನುಷ್ಯ ಅಂತರ್ಮುಖಿಯಾಗಿ ಸಾಗಲು ಭಕ್ತಿಮಾರ್ಗ ಮುಖ್ಯ. ಮಲ್ಲಿಕಾರ್ಜುನ ಶ್ರೀಗಳು ಧಾರ್ಮಿಕ ಕ್ಷೇತ್ರದಲ್ಲಿ ದೊಡ್ಡಹೆಸರು. ಯಾರೇ ಯತಿಗಳು ಬಂದರೂ ಪ್ರೀತಿಯಿಂದ ಮಾತನಾಡಿಸುತ್ತಿದ್ದರು. ಅಥಣಿ ಮುರುಘೇಂದ್ರ ಶಿವಯೋಗಿಗಳೆಂದರೆ ಶ್ರೀಗಳಿಗೆ ಅತ್ಯಂತ ಪ್ರೀತಿ. ಅವರ ಬದುಕು ಒಂದು ಸ್ವಷ್ಟತೆ ಮತ್ತು ಶುಭ್ರವಾದದ್ದು ಎಂದು ಸ್ಮರಿಸಿದರು.

ಡಾ. ಬಸವಕುಮಾರ ಸ್ವಾಮಿಗಳು ಮಾತನಾಡಿ, ಗುರುಶಿಷ್ಯರನ್ನು ಅಗಲಿಸುವುದು ಮಹಾಪಾಪ. ಇದರ ನೋವನ್ನು ಅವರೇ ಅನುಭವಿಸಬೇಕು. ಅಗಲಿದ ಶಿಷ್ಯನೂ ಕೂಡ ಇತರರಿಗೆ ಒಳ್ಳೆಯದನ್ನು ಮಾಡಬೇಕು ಎಂದು ಹೇಳುತ್ತ, ಮಲ್ಲಿಕಾರ್ಜುನ ಶ್ರೀಗಳ ಬದುಕನ್ನು ಸೂಕ್ಷ್ಮವಾಗಿ ಅವಲೋಕನ ಮಾಡಿದರು.

ರಾವಂದೂರು ಮುರುಘಾಮಠದ ಶ್ರೀ ಮೋಕ್ಷಪತಿ ಸ್ವಾಮಿಗಳು, ಎಸ್. ಲಿಂಗಮೂರ್ತಿ ಮಾತನಾಡಿದರು. ಶ್ರೀ ಬಸವಮೂರ್ತಿ ಮಾದಾರಚೆನ್ನಯ್ಯ ಸ್ವಾಮಿಗಳು, ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮಿಗಳು, ಡಾ. ಶಾಂತವೀರ ಸ್ವಾಮಿಗಳು, ವಿವಿಧ ಸಮಾಜದ ಸ್ವಾಮಿಗಳು, ಶಾಖಾಮಠದ ಸ್ವಾಮಿಗಳು, ಮತ್ತು ಹರಗುರು ಚರಮೂರ್ತಿಗಳು ಸೇರಿದಂತೆ ಹೆಚ್.ಎಂ. ಆನಂದಪ್ಪ, ಎಸ್.ಬಿ. ವಸ್ತ್ರದಮಠ, ಡಿ.ಎಸ್. ಮಲ್ಲಿಕಾರ್ಜುನ, ಮುರುಗೇಶ್, ಎಸ್.ವಿ. ನಾಗರಾಜಪ್ಪ ಮೊದಲಾದ ಭಕ್ತರು ಉಪಸ್ಥಿತರಿದ್ದರು.

ಶ್ರೀ ಶಾಂತವೀರ ಗುರು ಮುರುಘರಾಜೇಂದ್ರ ಸ್ವಾಮಿಗಳು ಪ್ರಾರ್ಥಿಸಿದರು. ದಾವಣಗೆರೆ ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮಿಗಳು ಸ್ವಾಗತಿಸಿದರು. ಚಿದರವಳ್ಳಿಯ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ನಿರೂಪಿಸಿದರು.





